ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಹುಣಸೂರು.

ಸಿ. ಮಿಸ್ ಸಂಖ್ಯೆ: 47 /15

ದಿನಾಂಕಃ 13.12.2016

| | | |
|---|---|---|
| ಹೆಸರು | ಃ ರತ್ನ | ಪಿಡಬ್ಲ್ಯೂ-1 |
| ಗಂಡ | ಃ ರಾಜು | ಸಿಡಬ್ಲ್ಯೂ-1 |
| ವಯಸ್ಸು | ಃ 31 ವರ್ಷ | |
| ಕೆಲಸ | : ಮನೆಕೆಲಸ | |
| ವಾಸಸ್ಥಳ | ಃ ಹುಣಸೂರು | ಪ್ರಮಾಣ ವಚನ ಬೋಧಿಸಿದೆ. |

ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಾದ ಶ್ರೀ ಸುರೇಶ್ ರವರಿಂದಃ-

ಈ ಪ್ರಕರಣದಲ್ಲಿ ನಾನು 1ನೇ ಅರ್ಜಿದಾರಳಾಗಿರುತ್ತೇನೆ. ದಿಃ 19.02.2007 ರಂದು ನಿಮಿಷಾಂಬ ದೇವಸ್ಥಾನದಲ್ಲಿ ನನ್ನ ಮತ್ತು 1ನೇ ಎದುರುದಾರರ ಮದುವೆಯಾಗಿರುತ್ತದೆ. 2ನೇ ಅರ್ಜಿದಾರಳು ನನ್ನ ಮಗಳು.

ನಮ್ಮ ಮದುವೆಯಾದ ನಂತರ ನಾನು ಮತ್ತು ನನ್ನ ಗಂಡ ಹುಣಸೂರಿನಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಾಗಿದ್ದೆವು. 6 ವರ್ಷ ನಾನು ಮತ್ತು ನನ್ನ ಗಂಡ ಚೆನ್ನಾಗಿದ್ದೆವು. ಮದುವೆಯಾದ ಎರಡು ವರ್ಷಗಳ ನಂತರ 2ನೇ ಅರ್ಜಿದಾರಳು ದಿಃ 9.2.2009 ರಂದು ಜನಿಸಿರುತ್ತಾಳೆ.

ನಮ್ಮ ಮದುವೆಯಾದ 6 ವರ್ಷಗಳ ನಂತರ ನನ್ನ ಗಂಡ ನನ್ನನ್ನು ಮತ್ತು ಮಗುವನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ ಮತ್ತು ನಮ್ಮನ್ನು ಉದಾಸೀನ ಮಾಡುತ್ತಿದ್ದರು. ಈ ರೀತಿ ಏಕೆ ಮಾಡುತ್ತೀರಿ ಎಂದು ನಾನು ನನ್ನ ಗಂಡನನ್ನು ಕೇಳಿದೆ. ನನ್ನ ಗಂಡ ಹೆಂಗಸಿನ ಜೊತೆ ಸುತ್ತಾಡುವುದನ್ನು ನಾನು ನೋಡಿದೆನು. ಈ ಬಗ್ಗೆ ನನ್ನ ಗಂಡನನ್ನು ಕೇಳಿದೆನು. ನನ್ನ ಗಂಡ ಆ ಹೆಂಗಸಿನ ಹೆಸರು ರತ್ನ ಎಂದು ಮತ್ತು ಆಕೆಯೊಂದಿಗೆ ತನಗೆ ಮೊದಲೇ ಮದುವೆಯಾಗಿರುವುದಾಗಿ ಹೇಳಿದರು. ಮೊದಲೇ ಮದುವೆಯಾಗಿದ್ದರು ಸಹ ನನ್ನ ಗಂಡ ನನಗೆ ಮೋಸ ಮಾಡಿ ನನ್ನನ್ನು

ಮದುವೆಯಾಗಿರುತ್ತಾರೆ. ಈ ಬಗ್ಗೆ ನಾನು ಪೋಲೀಸರಿಗೆ ಫಿರ್ಯಾದಿ ಕೊಟ್ಟೆನು. ಅಲ್ಲಿ ನನ್ನ ಗಂಡ ನನ್ನನ್ನು ಮತ್ತು ನನ್ನ ಮಗುವನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಮತ್ತು ತಿಂಗಳಿಗೆ ರೂಃ 10,000-00 ಜೀವನಾಂಶ ಕೊಡುವುದಾಗಿ ಮುಚ್ಚಳಿಕೆ ಪತ್ರ ಬರೆದುಕೊಟ್ಟರು. ಆದರೆ ಆ ರೀತಿ ನನ್ನ ಗಂಡ ನನಗೆ ಜೀವನಾಂಶದ ಹಣ ಕೊಡಲಿಲ್ಲ.

ನನ್ನ ಗಂಡ ಕಾಲೇಜಿನಲ್ಲಿ ಪ್ರಿನ್ಸಿಪಾಲರಾಗಿದ್ದು ಡಿಸೆಂಬರ್ 2015 ರಲ್ಲಿ ನಿವೃತಿ ಹೊಂದಿರುತ್ತಾರೆ. ನನ್ನ ಗಂಡನಿಗೆ ನಿವೃತಿಯಾಗುವ ಸಮಯದಲ್ಲಿ ರೂಃ 85,000-00 ವೇತನ ಬರುತ್ತಿತ್ತು. ನಿವೃತಿಯ ನಂತರ ನನ್ನ ಗಂಡನಿಗೆ ರೂಃ 40,000-00 ಮಾಸಿಕ ನಿವೃತಿ ವೇತನ ಬರುತ್ತಿದೆ. ನನ್ನ ಗಂಡನಿಗೆ ಅವರ ಊರಿನಲ್ಲಿ ಅಂದರೆ ಕನ್ನಂಬಾಡಿಯಲ್ಲಿ ಮೂಕ್ಕಾಲು ಎಕರೆ ಗದ್ದೆ, ಎರಡು ಮೂರು ಅಂಗಡಿ ಮಳಿಗೆಗಳು, ಮನೆ ಮತ್ತು ತೋಟ ಇರುತ್ತದೆ. ನನ್ನ ಗಂಡನಿಗೆ ಹುಣಸೂರಿನಲ್ಲಿ ಒಂದು ಮನೆ ಇದೆ. ಉಯಿಗೊಂಡನಹಳ್ಳಿಯಲ್ಲಿ ನನ್ನ ಗಂಡ ತೋಟ ಖರೀದಿ ಮಾಡಿದ್ದಾರೆ. ನನ್ನ ಗಂಡನಿಗೆ ತುಂಬಾ ಆದಾಯ ಇರುತ್ತದೆ.

ನಾನು ಬೇರೆಯವರ ಮನೆಯಲ್ಲಿ ಮನೆ ಕೆಲಸ ಮಾಡುತ್ತೇನೆ. ನನಗೆ ಮನೆ ಕೆಲಸ ಮಾಡುವುದರಿಂದ ತಿಂಗಳಿಗೆ ರೂಃ 3000-00 ಹಣ ಸಿಗುತ್ತದೆ. ನನ್ನ ಮಗಳಿಗೆ ಈಗ ಎಂಟು ವರ್ಷ ವಯಸ್ಸು, ಆಕೆ ಎರಡನೆ ತರಗತಿಯನ್ನು ಸೆಂಟ್ ಜೋಸಫ್ ಶಾಲೆಯಲ್ಲಿ ಓದುತ್ತಿದ್ದಾಳೆ. ನನ್ನ ಮಗಳ ಜೀವನ ನಿರ್ವಹಣೆ ಮತ್ತು ನನ್ನ ಜೀವನ ನಿರ್ವಹಣೆಗೆ ನನಗೆ ಆದಾಯ ಇರುವುದಿಲ್ಲ.

ಅರ್ಜಿಯಲ್ಲಿ ಕೇಳಿರುವಂತೆ ಜೀವನಾಂಶ ನೀಡಬೇಕಾಗಿ ವಿನಂತಿಸುತ್ತೇನೆ.

ಸಾಕ್ಷಿ ಗುರುತಿಸಿದ ದಾಖಲೆಗಳನ್ನು ಈ ಕೆಳಗಿನಂತೆ ನಿಶಾನೆಗಳನ್ನಾಗಿ ಗುರುತಿಸಲಾಗಿದೆ.

ನಿಪಿ.1 ಃ ನೋಟೀಸ್ ನಕಲು

ನಿಪಿ.2 ಃ ಅಂಚೆ ರಶೀದಿ

ನಿಪಿ.3 ಃ ಅಂಚೆ ತಲುಪು ಒಪ್ಪಿಗೆ ಪತ್ರ

ನಿಪಿ.4 ಃ ಆಧಾರ ಕಾರ್ಡ್ ನಕಲು

ನಿಪಿ.5 ಃ ಚುನಾವಣಾ ಗುರುತಿಸಿನ ಚೀಟಿಯ ನಕಲು

**(ಎದುರುದಾರರ ಹಾಜರಿಲ್ಲ. ಪ್ರತಿನಿಧಿತ್ವ ಇಲ್ಲ ಪಾಟೀ ಸವಾಲು ಮುಂದೂಡಲಾಯಿತು).**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇದೆ.**

**(ಹತ್ತಿಕಾಳ ಪ್ರಭು.ಎಸ್.)**
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ಹುಣಸೂರು.